ಓ.ಎಸ್ 212/2017 ಡಿ.ಡಬ್ಲು-1
ಕುಬೇರಪ್ಪ ತಂದೆ ಕುಪ್ಪಣ್ಣ

ದಿ.24-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ವಿ.ಪಿ.ಎಸ್.ಜೆ ವಕೀಲರಿಂದ :-**

ಸರ್ವೆ ನಂ.395/1 ರ ವಿಸ್ತೀರ್ಣ ಎಷ್ಟು ಇದೆ ನನಗೆ ಗೊತ್ತಿಲ್ಲ. ಸರ್ವೆ ನಂ.395/1 ರಲ್ಲಿ ನಮ್ಮ ತಾಯಿಗೆ ಮಂಜೂರಾದ ನಿವೇಶನದ ಕಬ್ಜಾ ರಸಿದಿಯನ್ನು ತಹಶೀಲ್ದಾರ, ತಲಾಟಿರವರು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಸ್ಥಳದಲ್ಲಿ ಪಂಚನಾಮೆ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.395/1 ರಲ್ಲಿ ಸರ್ಕಾರದವರು ಸುಮಾರು ನಿವೇಶನಗಳನ್ನು ಮಂಜೂರು ಮಾಡಿದ್ದಾರೆ ಎಂದರೆ ಸರಿ. ಮಂಜೂರಾದ ನಿವೇಶನಗಳಿಗೆ ತಹಶೀಲ್ದಾರ ರವರು ಕ್ರಮ ಸಂಖ್ಯೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ಹೆಬ್ಬೆಟ್ಟಿನ ಗುರುತು ಹಾಕುತ್ತಾರೆ. ನಮ್ಮ ತಾಯಿಗೆ 30 * 40 ಅಳತೆಯಲ್ಲಿ ಮಂಜೂರಾಗಿದ್ದು ಅದು ತದನಂತರದಲ್ಲಿ 60 * 40 ರ ವಿಸ್ತೀರ್ಣದ ಎರಡು ನಿವೇಶನ ಕೀಬಾಲ ಅಥವಾ ಹಕ್ಕು ಪತ್ರ ಕೊಟ್ಟಿದ್ದಾರೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

2. ನಮ್ಮ ತಂದೆ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಕೆಲವೊಂದು ಕರ ರಸೀದಿಗಳನ್ನು ಸಹಿ ಮಾಡಿಸಿಕೊಂಡು ಬರಲು ಅವರ ಹಿರಿಯ ಅಧಿಕಾರಿಗಳು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಕೀಬಾಲ ಪ್ರಕಾರ 30 * 40 ವಿಸ್ತೀರ್ಣದ ನಿವೇಶನ ಸರ್ವೆ ನಂ.395/1 ರಲ್ಲಿ ಹಾಗೂ ಮುನಿಸಿಪಾಲಿಟಿ ದಾಖಲೆಗಳಲ್ಲಿ ವರ್ಗಾವಣೆಯಾದ ಬಗ್ಗೆ ದಾಖಲಾಗಿಲ್ಲ ಎಂದರೆ ಸರಿಯಲ್ಲ. 30 * 40 ವಿಸ್ತೀರ್ಣದ ನಿವೇಶನ ಬಿಟ್ಟು ಬೇರೆ ವಿಸ್ತೀರ್ಣದ ನಿವೇಶನಗಳು ಮಂಜೂರಾಗಿಲ್ಲ ಎಂದರೆ ಸರಿಯಲ್ಲ. 30 * 40 ವಿಸ್ತೀರ್ಣದ ನಿವೇಶನ ಬಿಟ್ಟು ಬೇರೆ ವಿಸ್ತೀರ್ಣದ ನಿವೇಶನಗಳು ನಮ್ಮ ತಾಯಿಗೆ ಮಂಜೂರಾದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ಪಂಚನಾಮೆ ಮಾಡಿ 30 * 40 ನಿವೇಶನವನ್ನು ಕಬ್ಜಾ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೀಬಾಲ ಮಂಜೂರಾತಿ ಆದೇಶದ ಪ್ರಕಾರ ರೂ.1200/- ಕಟ್ಟಿದ ರಸೀದಿ ನಮ್ಮ ತಾಯಿಯ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿವೇಶನ ಮಂಜೂರಾಗಿ ಎಷ್ಟು ದಿನದ ನಂತರ ಕಬ್ಜಾ ಪಡೆದಿರುತ್ತೇವೆ ಎಂದು ನನಗೆ ನೆನಪಿಲ್ಲ.

3. ನಿ.ಡಿ-3 ರಲ್ಲಿ ನಿವೇಶನ ವಿಸ್ತೀರ್ಣ ನಮೂದು ಮಾಡಿಲ್ಲ ಎಂದರೆ ಸರಿ. ಅದೇ ರೀತಿ ಹಳೆಯ ಆಸ್ತಿ ಸಂಖ್ಯೆ ಬರೆದಿರುವುದಿಲ್ಲ. ನಿ.ಡಿ-3 ಇದು 2004 ನೇ ಸಾಲಿನದಾಗಿರುತ್ತದೆ.

ನಿವೇಶನ ನಂ.2-12-300 ಎ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ತಾಯಿಯ ಹೆಸರಿನಲ್ಲಿ ಮೊದಲಿನಿಂದಲೂ ಇದ್ದ ಬಗ್ಗೆ ವರ್ಗಾವಣೆ ಆದೇಶ ಮತ್ತು ಕರ ಪಾವತಿಗಳನ್ನು ಹಾಜರು ಪಡಿಸಿರುತ್ತೇನೆ. ನಿವೇಶನ ನಂ.2-12-300 ಕ್ಕೆ ಸಂಬಂಧಿಸಿದಂತೆ ದಿನಾಂಕ 25-03-1987 ರ ರಸೀದಿ ಇದ್ದು ಅದು ಕಂದಾಯ ಅಧಿಕಾರಿಗಳು ನಿವೇಶನ ಮಂಜೂರು ಮಾಡುವದಕ್ಕಿಂತ ಮುಂಚೆ ನೀರಿಗಾಗಿ ಕಟ್ಟಿದ ರಸೀದಿ ಎಂದರೆ ಸರಿ. ನಮ್ಮ ತಂದೆ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುತ್ತಿದ್ದಿದ್ದರಿಂದ ನಿವೇಶನ ಮಂಜೂರಾಗುವದಕ್ಕಿಂತ ಮುಂಚೆ ನಿ.ಡಿ-4 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುನಿಸಿಪಾಲಿಟಿಯವರು ನಡೆಸುವ ಸಭಾ ನಾಡವಳಿ ಹಾಗೂ ಕೀಬಾಲ ಮಂಜೂರಾದ ಆದೇಶದ ನಂಬರಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.